**<u>ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳು</u>**

**<u>ಹುಕ್ಕೇರಿ</u>**

CC No. 942/2024

CW- 1 / PW- 1

ಹೆಸರು : ಕಮಲವ್ವ ಈರಪ್ಪ ಗಂಡ್ರೋಳಿ

ವಯಸ್ಸು : 60 ವರ್ಷ

ಉದ್ಯೋಗ : ಮನಗೆಲಸ

ವಾಸಸ್ಥಳ : ಯರಗಟ್ಟಿ, ತಾಃ ಹುಕ್ಕೇರಿ

ದಿನಾಂಕ 06-06-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು)

**<u>ಮುಂದುವರೆದ ಪಾಟಿ ಸವಾಲುಃ ಆರೋಪಿ ಪರ ಶ್ರೀ ಕೆ ಎಲ್ ಜೆ ವಕೀಲರಿಂದ –</u>**

1. ನಮ್ಮ ಮನೆತನಕ್ಕೆ ಸೇರಿದ ಒಂದು ಜವಿಜೀನು ಪಾಲು ಆಗಿದೆ, ಉಳಿದ ಜಮಿನುಗಳು ಪಾಲು ಆಗಿಲ್ಲ. ಆರೋಪಿತರು ಉಳಿದ ಜಮೀನುಗಳನ್ನು ಪಾಲು ಮಾಡಿಕೊಳ್ಳಲು ಕೇಳಿದ್ದರು ಎಂದರೆ ನಿಜ. ನಾವು ಪಾಲು ಆಗುವುದಕ್ಕೆ ತಕರಾರು ತೆಗೆದಿದ್ದೆವು ಎಂದರೆ ಸರಿಯಲ್ಲ. ಘಟನೆ ನಡೆದ ಸಂದರ್ಭದಲ್ಲಿ ನಮ್ಮ ಹೊಲದಲ್ಲಿ ನಾನು ಅವರ ಹೊಲದಲ್ಲಿ ಅವರು ಇದ್ದರು ಎಂದರೆ ನಿಜ. ಘಟನೆ ನಡೆದ ಸಂದರ್ಭದಲ್ಲಿ ಬಸ್ ಸ್ಟಾಂಡ್ ಹತ್ತಿರ ಜನ ನೋಡುತ್ತಿದ್ದರು, ಆದರೆ ಅವರು ಯಾರು ಬಿಡಿಸಲು ಬಂದಿರಲಿಲ್ಲ. ನನಗೆ ಶೋಭಾ ಗಂಡ್ರೋಳಿ ಬಡಿಗೆಯಲ್ಲಿ ಬಡಿದಳು. ಕಲ್ಲು ತೆಗೆದುಕೊಂಡು ನನ್ನ ತಲೆ ಮತ್ತು ಕಾಲಿಗೆ ಒಗೆದಳು. ಸೀರೆಗೆ ರಕ್ತ ಹತ್ತಿತ್ತು ಅದನ್ನು ನಾವು ತೆಗೆದು ಇಡಲಿಲ್ಲ. ಆ ಸೀರೆಯನ್ನು ನಾನು ಪೊಲೀಸರಿಗೆ ತೋರಿಸಿದೆ ಅವರು ದವಾಖಾನೆಗೆ ಕಳುಹಿಸಿದರು. ಅದೇ ಸೀರೆ ಮೇಲೆ ನಾನು 4 ದಿನ ದವಾಖಾನೆಯಲ್ಲಿ ಇದ್ದೆ, ಪೊಲೀಸರಿಗೆ ಆ ಸೀರೆಯನ್ನು ಕೊಡಲಿಲ್ಲ, ಕಾರಣ ಅವರು ಅದನ್ನು ಕೇಳಲಿಲ್ಲ. ಬಡಿಗೆಗೆ ಮತ್ತು ಕಲ್ಲಿಗೆ ರಕ್ತ ಹತ್ತಿತ್ತೋ ಇಲ್ಲವೋ ನಾನು ನೋಡಲಿಲ್ಲ. ನ್ಯಾಯಾಲಯದ ಮುಂದೆ ಇರುವ ಮು.ಮಾ-1 ಮತ್ತು 2 ಕ್ಕೆ ರಕ್ತ ಹತ್ತಿಲ್ಲ ಎಂದರೆ ನಾನು ತಲೆಗೆ ಟವೆಲ್ ಕಟ್ಟಿದ್ದೆ ಎಂದು ಹೇಳುತ್ತಾರೆ. ಮು.ಮಾ-2 ಕಲ್ಲು ರಸ್ತೆಗೆ ಡಾಂಬರೀಕರಣ ಮಾಡುವ ಕಲ್ಲು, ಅದು ಕೃಷಿ ಭೂಮಿಯಲ್ಲಿ ಸಿಗುವ ಕಲ್ಲು ಅಲ್ಲ ಎಂದರೆ ಸಾಕ್ಷಿ ಅದು ನಮ್ಮ ಜಮೀನಿನ ದಂಡೆಯಲ್ಲಿ ಸಿಗುತ್ತದೆ, ನಮ್ಮ ಜಮೀನು ರಸ್ತೆಗೆ ಲಗತ್ತಾಗಿದೆ ಎಂದು ಹೇಳುತ್ತಾರೆ. ನಮ್ಮ ಜಮೀನು ಎರಿ ಜಮೀನು ಎಂದರೆ ನಿಜ. ನಮ್ಮ ಜಮೀನಿನಲ್ಲಿ 15-20 ಅಡಿ ಆಳದಲ್ಲಿ ಕಲ್ಲು ಸಿಗುವುದಿಲ್ಲ

ಎಂದರೆ ಸಾಕ್ಷಿ ನಮ್ಮ ಮತ್ತು ಆರೋಪಿತರ ಜಮೀನಿನ ಮಧ್ಯೆ ಕಲ್ಲು ಗೋಡೆ ಇದ್ದು, ಅದರ ಚೀಪು ಕಲ್ಲು ಅಲ್ಲೇ ಇವೆ ಎಂದು ಹೇಳುತ್ತಾರೆ. ಬೊಗಸೆಯಲ್ಲಿ ಕಲ್ಲು ತೆಗೆದುಕೊಂಡು ನನಗೆ ಹೊಡೆದರು. ಆರೋಪಿತರು ಅಲ್ಲೇ ಇದ್ದ ಕಲ್ಲು ತೆಗೆದುಕೊಂಡು ನನಗೆ ಒಗೆದರು ಎಂದು ನಾನು ಮುದ್ದಾಂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು ಮಾ-1 ಬಿದಿರಿನ ಬಡಿಗೆ ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲಿ ಸಿಗುತ್ತವೆ ಎಂದರೆ ನಮಗೇನು ಗೊತ್ತು ಎಂದು ಹೇಳುತ್ತಾರೆ. ಮು.ಮಾ-1 ಬಡಿಗೆ ನನ್ನ ಮಗ ತಂದು ಪೊಲೀಸರಿಗೆ ಕೊಟ್ಟಿದ್ದ ಎಂದರೆ ಸರಿಯಲ್ಲ. ಆ ಬಡಿಗೆ ಮತ್ತು ಕಲ್ಲನ್ನು ನನ್ನ ಗಂಡ ಘಟನೆಯಾದ ಮಾರನೇ ದಿನ ಪೊಲೀಸರಿಗೆ ತಂದುಕೊಟ್ಟಿದ್ದ ಎಂದು ಹೇಳುತ್ತಾರೆ. ನನ್ನ ಮಗನಿಗೆ ಕುಡಿಯುವ ಚಟ ಇದ್ದು, ಆತ ಕುಡಿದು ಬಂದು ನನಗೆ ಬಡಿದಿದ್ದ ಎಂದರೆ ಸರಿಯಲ್ಲ. ಆ ಗಾಯವನ್ನು ದುರುಪಯೋಗ ಪಡಿಸಿಕೊಂಡು ನಾನು ಸುಳ್ಳು ಕಂಪ್ಲೆಂಟ್ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಶೋಭಾ ಕಲ್ಲಿನಿಂದ ಬಡಿದಳು ಎಂದು ಹಾಗೂ 2ನೇ ಆರೋಪಿ ಕೈ ಕಾಲು ತೆಗೇಯುತ್ತೇನೆ ಎಂದು ಬೆದರಿಗೆ ಹಾಕಿದ ಎಂದು ಹಾಗೂ ರಾಜು ಬಡಿಗೆಯಿಂದ ಬಡಿದ ಎಂದು ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನ ಮಗಳಿಗೆ ಕೊಟ್ಟಂತಹ ರೂ.40,000/- ಗಳನ್ನು ಹಾಗೂ ನಮಗೆ ಕಾಂಪ್ಲೆಕ್ಸ್ ಕಟ್ಟಲು ಕೊಟ್ಟಂತ ರೊಕ್ಕ ವಾಪಸ್ ಕೇಳಿದಾಗ ಅದನ್ನು ಮುಳುಗಿಸುವ ಸಲುವಾಗಿ ನಾನು ನನ್ನ ಮಗಳ ಮಾತು ಕೇಳಿ ಸುಳ್ಳು ದೂರು ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

**( ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆಳರಚ್ಚು ಮಾಡಲಾಯಿತು)**

**ಓ ಹೇ ಕೇ ಸರಿ ಅದೇ**

**Sd/-**

(ಆದಿತ್ಯ ಆರ್. ಕಲಾಲ್)

ಸಿ ಜೆ ಮತ್ತು ಜೆ ಎಂ ಎಫ್ ಸಿ , ಹುಕ್ಕೇರಿ